DW1

ಅಸಲ ದಾವಾ ನಂ.110/2018

ಮೆ:: ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಗೋಕಾಕ ಇವರ ನ್ಯಾಯಾಲಯದಲ್ಲಿ ಗೋಕಾಕ

1] ಶ್ರೀ. ಪರಪ್ಪ @ ಪ್ರಭು ತಂದೆ ಶ್ರೀಕಾಂತ ಇಟ್ನಾಳ

...... ವಾದಿ

// ವಿರುದ್ಧ //

1] ಶ್ರೀ. ಸಿದ್ದಪ್ಪ ತಂದೆ ರಾಯಪ್ಪ ಡೋಣಿ
ಹಾಗೂ ಇತರರು

...... ಪ್ರತಿವಾದಿಯರು

**ಡಿ.ಡಬ್ಲ್ಯೂ–1 ಇವರ ಮುಖ್ಯ ಸಾಕ್ಷಿ ವಿಚಾರಣೆ ಅಫೀಡವ್ಹಿಟ ಮೂಲಕ**

NOTARY * GOVERNMENT OF INDIA * S.B. GOROSHI GOKAK TALUKA DIST:BELAGAVI KARNATAKA REG.No:13237/2017 EXPIRY DATE: 25-04-2027

| | |
|---|---|
| ಹೆಸರು | : ಸಿದ್ದಪ್ಪ ಡೋಣಿ |
| ತಂದೆಯ ಹೆಸರು | : ರಾಯಪ್ಪ ಡೋಣಿ |
| ವಯಸ್ಸು | : 48 ವರ್ಷ |
| ಉದ್ಯೋಗ | : ಒಕ್ಕಲುತನ |
| ಸಾಕೀನ | : ಕೌಜಲಗಿ<br>ತಾ: ಗೋಕಾಕ, ಜಿ: ಬೆಳಗಾವಿ |

ಈ ಹೊತ್ತು ಮುಕ್ಕಾಂ ಗೋಕಾಕದಲ್ಲಿ ಸತ್ಯ ಪ್ರತಿಜ್ಞೇ ಮೇರೆಗೆ ಬರಕೊಡುವ ಸಾಕ್ಷಿ ಪ್ರಮಾಣ ಪತ್ರ ಏನೆಂದರೆ:-

1) ಈ ದಾವೆದಲ್ಲಿ ನಾನು ಪ್ರತಿವಾದಿ ನಂ.1 ಇರುತ್ತೇನೆ. ನನಗೆ ಸದರಿ ದಾವೆದ ಬಗ್ಗೆ ಸಂಪೂರ್ಣ ಮಾಹಿತಿ ಇರುತ್ತದೆ. ಕಾರಣ ಸದರಿ ಅಫೀಡವ್ಹಿಟನ್ನು ನನ್ನ ಪರವಾಗಿ ಹಾಗೂ ಪ್ರತಿವಾದಿ ನಂ.2 & 3 ಇವರ ಪರವಾಗಿ ಮಾಡಲು ಅರ್ಹನಿರುತ್ತೇನೆ.

ಸಿದ್ದಪ್ಪ.ರಾ.ಡೋಣಿ

NO OF CORRECTION Nil

2) ನಾನು ಖಾಯಂ ತರೀಖ ಕೌಜಲಗಿ ಗ್ರಾಮದಲ್ಲಿ ಒಕ್ಕಲುತನ ಉದ್ಯೋಗ ಮಾಡಿಕೊಂಡು ಇರುತ್ತೇನೆ. ನಾನು, ನನ್ನ ಹೆಂಡತಿ, ಮಕ್ಕಳು ಎಲ್ಲರೂ ಕೂಡಿ ಜಂಟಿ ಕುಟುಂಬದ ಸದಸ್ಯರು ಇರುತ್ತೇವೆ. ನಮ್ಮ ಮೂಲ ಉದ್ಯೋಗ ಒಕ್ಕಲುತನ, ನಮ್ಮ ಮನೆತನದ ಆಸ್ತಿಗಳಲ್ಲಿ ನನಗೂ ಹಾಗೂ ನನ್ನ ಹೆಂಡತಿ ಮಕ್ಕಳ ನಡುವೆ ಪಾಲು ಆಗಿರುವುದಿಲ್ಲ, ವಾದಿಯು ಚಿಲಕುಂದಿ ಗ್ರಾಮದಲ್ಲಿ ವಾಸವಾಗಿರುತ್ತಾನೆ, ಚಿಲಕುಂದಿ ಮತ್ತು ಕೌಜಲಗಿ ಎರಡು ಗ್ರಾಮಗಳು ಸಮೀಪ ಇರುತ್ತವೆ.

3) 2011ನೇ ಜುಲೈ ತಿಂಗಳಲ್ಲಿ ನನಗೆ ಹಣದ ಅಡಚಣೆ ಇತ್ತು. ಆ ವೇಳೆಯಲ್ಲಿ ನನಗೆ ರೂ.2 ಲಕ್ಷ ರೂಪಾಯಿಗಳ ಸಾಲ ಬೇಕಾಗಿತ್ತು, ವಾದಿಯ ಕಡೆಯಿಂದ ರೂ.2 ಲಕ್ಷ ಮಾತ್ರ ಪ್ರತಿ ತಿಂಗಳ ಬಡ್ಡಿ ಆಧಾರದ ಮೇಲಿಂದ ಸಾಲ ಪಡೆದಿದ್ದೇನು. ಸದರಿ ಸಾಲವನ್ನು ಪಡೆಯುವ ಕಾಲಕ್ಕೆ ಸದರಿ ಸಾಲದ ಭದ್ರತೆಗಾಗಿ ವಾದಿಯು ರೂ.2 ಲಕ್ಷ ಸಾಲದ ಭದ್ರತೆಗಾಗಿ ಕಾಗದ ಮಾಡಿಕೊಟ್ಟರೆ ಸಾಲ ಕೊಡುತ್ತೇನೆ ಅಂತಾ ಹೇಳಿದ್ದನು, ಆ ಪ್ರಕಾರ ಕೌಜಲಗಿ ಗ್ರಾಮದ ರಿ.ಸ.ನಂ.296/2, ಕ್ಷೇತ್ರ 11ಎ-17ಗುಂಟೆ ಈ ಜಮೀನದ ಪೈಕಿ 06ಎ-08ಗುಂಟೆ ಜಮೀನಿನ ಬಗ್ಗೆ ಕಾಗದ ಆಗಿರುತ್ತದೆ, ಆದರೆ ಅದು ನಿಜವಾದ ಖರೀದಿ ಕರಾರು ಪತ್ರ ಕಾಗದ ಆಗಿರುವುದಿಲ್ಲ. ಕೇವಲ ರೂ.2 ಲಕ್ಷ ಗಳಿಗೆ 06ಎ-08ಗುಂಟೆ ಜಮೀನನ್ನು ಮಾರಾಟ ಮಾಡುವ ಮಾತುಕತೆ ಆಗಲಿ ಅಥವಾ ಆತನ ಕಡೆಯಿಂದ ಮುಂಗಡ ಹಣ ಆಗಲಿ ಪಡೆದುಕೊಂಡಿರುವುದಿಲ್ಲ. ಕೇವಲ ಹಿರಿಯರ ಸಮಕ್ಷಮದ ರೂ.2 ಲಕ್ಷ ರೂಪಾಯಿ ಸಾಲದ ಭದ್ರತೆಗಾಗಿ ಕಾಗದವನ್ನು 2011 ರಲ್ಲಿ ಸೃಷ್ಟಿಸಿದ್ದು ಇರುತ್ತದೆ. ಆದರೆ ನಾನು 2011 ರಲ್ಲಾಗಲಿ ಅಥವಾ ಮತ್ತೆ ಯಾವಾಗಲೂ ಆಸ್ತಿಯನ್ನು ಮಾರಾಟ ಮಾಡುವ ಬಗ್ಗೆ ಮಾತುಕತೆ ಆಗಿರುವುದಿಲ್ಲ ಮತ್ತು ಮುಂಗಡ ಹಣ ಸ್ವೀಕರಿಸಿರುವುದಿಲ್ಲ.

NOTARY * S.B. GOROSHI GOKAK TALUKA DIST:BELAGAVI KARNATAKA REG.No:13237/2017 EXPIRY DATE: 25-04-2027 GOVERNMENT OF INDIA

Nil

NO OF CORRECTION

4) 2011 ರಲ್ಲಿ ಆದಂತಹ ನೋಂದಾಯಿತ ಕಾಗದವು ಕೇವಲ ಸಾಲದ ಭದ್ರತೆಗಾಗಿ ಮಾಡಿದ ಕಾಗದ ಇದ್ದು, ನಾನು ಬರಹಗಾರರಿಗೆ ಆಸ್ತಿಯನ್ನು ಮಾರಾಟ ಮಾಡಿ ಮುಂಗಡ ಹಣವನ್ನು ಪಡೆದಿರುತ್ತೇನೆ ಹಾಗೂ ನಾನು ಆಸ್ತಿಯನ್ನು ಮಾರಾಟ ಮಾಡುವವನಿರುತ್ತೇನೆ ಅಂತಾ ಮಾಹಿತಿ ನೀಡಿರುವುದಿಲ್ಲ. ಹಿರಿಯರ ಹೇಳಿಕೆಯ ಪ್ರಕಾರ ಇದು ಸಾಲದ ಭದ್ರತೆಗಾಗಿ ಮಾತ್ರ ಮಾಡಿಕೊಟ್ಟಂತಹ ಕಾಗದ ಆಗಿರುತ್ತದೆ.

5) ನಾನು ತೆಗೆದುಕೊಂಡ ರೂ.2 ಲಕ್ಷ ಸಾಲದ ಹಣವನ್ನು 3 ವರ್ಷ ಒಳಗಾಗಿ ಬಡ್ಡಿ ಸಮೇತ ತಿರಿಸುವ ಕರಾರಿನಿಂದ ಸದರಿ ಕಾಗದದಲ್ಲಿ 3 ವರ್ಷ ಅಂತಾ ಅವಧಿಯನ್ನು ನಮೂದಿಸಿರುತ್ತಾರೆ. ದಿ:28/06/2014 ರಂದು ನಾನು ವಾದಿಯಿಂದ ಪಡೆದುಕೊಂಡ ರೂ.2 ಲಕ್ಷ ರೂಪಾಯಿ ಸಾಲದ ಹಣವನ್ನು ಪರತ ಕೊಟ್ಟು ಸದರಿ ಕಾಗದವನ್ನು ರದ್ದುಪಡಿಸುವ ಸಲುವಾಗಿ ಗೋಕಾಕಕ್ಕೆ ಬಂದಿದ್ದೇವು, ಆ ವೇಳೆಯಲ್ಲಿ ನನಗೂ ಹಾಗೂ ವಾದಿಗೂ ಬಡ್ಡಿಯ ವ್ಯವಹಾರದಲ್ಲಿ ಹೆಚ್ಚು ಬಡ್ಡಿ ಆಕರಣೆ ಮಾಡಿದ್ದರಿಂದ ನನಗೆ ಕೊಡಲು ಆಗದೇ ಇರುವುದರಿಂದ ಆಗ ಕೇವಲ ಅಸಲ ಹಣವನ್ನು ವಾದಿಗೆ ಕೊಟ್ಟಿರುತ್ತೇನೆ, ಆದರೆ 2011 ರಿಂದ ಇಲ್ಲಿಯವರೆಗೆ ಒಪ್ಪಿಕೊಂಡಂತಹ ಬಡ್ಡಿ ಹಾಗೂ ಹೆಚ್ಚಿನ ಬಡ್ಡಿ ಕೊಡಲಿಕ್ಕೆ ಆಗದೇ ಇರುವುದರಿಂದ ವಾದಿಯು ಅದೇ ದಿವಸ 2011 ರಲ್ಲಿ ಆದ ಕಾಗದವನ್ನು ರದ್ದುಪಡಿಸಿ ದಿ:28/06/2014 ರಂದು ಮತ್ತೊಂದು ಕಾಗದವನ್ನು ವಾದಿಯು ನನ್ನ ಹೆಸರನಿಂದ ಮಾಡಿಸಿಕೊಂಡಿದ್ದು ಇರುತ್ತದೆ. 2014 ರಲ್ಲಿ ಆದಂತಹ ಕಾಗದವು ಕೇವಲ ಹಣದ ಬಡ್ಡಿ ಕೊಡಲಿಕ್ಕೆ ವ್ಯವಹಾರವಾಗಿದ್ದು ಆ ಕಾಗದವು ಸಹಿತ ನಿಜವಾಗಿ ಆಸ್ತಿಯನ್ನು ಮಾರಾಟ ಮಾಡುವ ಕಾಗದ ಆಗಿರುವುದಿಲ್ಲ. ದಿ:28/06/2014 ರಂದು ಮೊದಲಿನ ಕಾಗದವನ್ನು ರದ್ದುಪಡಿಸಿ ಉಳಿದ ರಕಂಗಾಗಿ 2014 ರಲ್ಲಿ ಮತ್ತೊಂದು ಕಾಗದವನ್ನು ವಾದಿಯು ನನ್ನ ಕಡೆಯಿಂದ ಮಾಡಿಸಿಕೊಂಡಿರುತ್ತಾನೆ.

NOTARY * S.B. GOROSHI GOKAK TALUKA DIST:BELAGAVI KARNATAKA REG.No:13237/2017 EXPIRY DATE: 25-04-2027 * GOVERNMENT OF INDIA

Nil

NO OF CORRECTION

ಸಿದ್ದಪ್ಪಾ.ರಾ.ದಳವಿ

6) ಈ ಪ್ರಕರಣದಲ್ಲಿ ಅಡಕವಾಗಿರುವ 2016 ರ ಕಾಗದವು ಸಹಿತ ನಿಜವಾದ ಖರೀದಿ ಕರಾರ ಪತ್ರ ಆಗಿರುವುದಿಲ್ಲ. 2016 ರಲ್ಲಿ ನಾನು ದಾವಾದ ಆಸ್ತಿ 03ಎಕರೆ ಜಮೀನನ್ನು ವಾದಿ ಪರಪ್ಪ @ ಪ್ರಭು ಇತನಿಗೆ ಮಾರಾಟ ಮಾಡುವ ಬಗ್ಗೆ ಮಾತುಕತೆ ಆಗಲಿ ಮತ್ತು ಅವನಿಂದ ಮುಂಗಡ ಹಣ ಅಂತಾ ಯಾವುದೆ ಹಣವನ್ನು ಪಡೆದಿರುವುದಿಲ್ಲ. 2016 ರಲ್ಲಿ ಕಾಗದದಲ್ಲಿ ನಮೂದಿಸಿದಂತೆ ನನಗೆ ರೂ.10 ಲಕ್ಷ ರೂಪಾಯಿಗಳನ್ನು ಹಂತ ಹಂತವಾಗಿ ಆಗಲಿ ಅಥವಾ ಕಾಗದ ಬರೆದ ದಿವಸ ಕೊಟ್ಟಿರುವುದಿಲ್ಲ. 2014 ರಲ್ಲಿ ಹೆಚ್ಚಿನ ಬಡ್ಡಿ ಕೊಡುವ ಸಲುವಾಗಿ ದಿ:26/06/2016 ರಂದು ಹಳೆಯ ಕಾಗದವನ್ನು ರದ್ದುಪಡಿಸಿ 3ನೇ ಕಾಗದವನ್ನು ಅಂದರೆ ಹೆಚ್ಚಿನ ಬಡ್ಡಿಯ ಸಲುವಾಗಿ ಮಾಡಿಕೊಟ್ಟ ಕಾಗದ ಆಗಿರುತ್ತದೆ.

7) ವಾದಿಯು ಪರಪ್ಪ 2011 ರಲ್ಲಾಗಲಿ, 2014 ರಲ್ಲಾಗಲಿ ಮತ್ತು 2016 ರಲ್ಲಾಗಲಿ ಮೂರು ಕಾಗದಗಳಲ್ಲಿ ನಮೂದಿಸಿದಂತೆ ಅಷ್ಟು ಮೊತ್ತದ ಹಣವನ್ನು ನನಗೆ ನೀಡಿರುವುದಿಲ್ಲ. ಈ ಮೂರು ಕಾಗದಗಳು ಕೇವಲ 2011 ರಲ್ಲಿ ತೆಗೆದುಕೊಂಡ ಸಾಲದ ಭದ್ರತೆಗಾಗಿ ತೆಗೆದುಕೊಂಡ ಕಾಗದಗಳಾಗಿರುತ್ತವೆ. 2016 ರಲ್ಲಿ ನಾನು ದಾವಾದ ಆಸ್ತಿ 03ಎಕರೆ ಜಮೀನನ್ನು ವಾದಿಗೆ ಮಾರಾಟ ಮಾಡುವ ಬಗ್ಗೆ ಹಿರಿಯರ ಸಮಕ್ಷಮ ಮಾತುಕತೆ ಆಗಿರುವುದಿಲ್ಲ, 2016 ರಲ್ಲಿ ಕಾಗದದಲ್ಲಿ ಬರೆದಂತೆ ಆತನು ನನಗೆ ರೂ.10 ಲಕ್ಷ ರೂಫಾಯಿಗಳು ಮುಟ್ಟಿಸಿರುವುದಿಲ್ಲ.

8) ಯಲ್ಲಪ್ಪ ಸಿದ್ದಪ್ಪ ಬಂಗಿ ಇತನು ವಾದಿ ಪರಪ್ಪ ಇತನ ಹತ್ತಿರದ ಸಂಬಂಧಿಕ ಇರುತ್ತಾನೆ. ಆತನು ಸಹಿತ ಬಿಲಕುಂದಿ ಗ್ರಾಮದವನಿರುತ್ತಾನೆ. ಹೀಗಾಗಿ ಪರಪ್ಪ ಹಾಗೂ ಸಾಕ್ಷಿದಾರರು ಮತ್ತು ಬರಹಗಾರರು ಕೂಡಿಕೊಂಡು ಹಳೆಯ ಸಾಲದ ಭದ್ರತೆಗಾಗಿ ಖೊಟ್ಟಿ ಕಾಗದವನ್ನು ಸೃಷ್ಟಿಸಿದ್ದು ಇರುತ್ತದೆ. ಹೀಗೆ ವಾದಿಯು ಸಾಕ್ಷಿದಾರರ, ಬರಹಗಾರರು, ಯಲ್ಲಪ್ಪ ಸಿದ್ದಪ್ಪ ಭಂಗಿ, ಇವರೆಲ್ಲರೂ

ಸಿದ್ದಪ್ಪಾ·ಗಾ·ಡಗಿ

NOTARY * S.B. GOROSHI GOKAK TALUKA DIST:BELAGAVI KARNATAKA REG.No:13237/2017 EXPIRY DATE: 29-04-2027 GOVERNMENT OF INDIA

Nil

NO OF CORRECTION

ಕೂಡಿಕೊಂಡು 2011 ರಲ್ಲಿ ರೂ.2 ಲಕ್ಷ ರೂಪಾಯಿ ಹಣವನ್ನು ಸಾಲದ ರೂಪದಲ್ಲಿ ಕೊಟ್ಟು ಹಣವನ್ನು ಬಿಟ್ಟರೆ ಬೇರೆ ಯಾವುದೆ ಹಣವನ್ನು ಕೊಡದೇ ಖೊಟ್ಟಿ ಕಾಗದಗಳನ್ನು ಸೃಷ್ಟಿಸಿರುತ್ತಾರೆ. ವಾದಿ-ಪರಪ್ಪ ಇತನು ಬಡ್ಡಿ ವ್ಯವಹಾರ ಮಾಡುತ್ತಾನೆ. ದಿ:28/06/2016 ರಂದು ದಾವಾದ ಆಸ್ತಿಯನ್ನು ಮಾರಾಟ ಮಾಡುವ ಬಗ್ಗೆ ಮಾತುಕತೆ ಆಗಿರುವುದಿಲ್ಲ ಮತ್ತು ಸದರಿ ಕಾಗದಗಳಲ್ಲಿ ನಮೂದಿಸಿದ ರೂ.10 ಲಕ್ಷ ರೂಪಾಯಿ ಹಣ ನನಗೆ ಮುಟ್ಟಿರುವುದಿಲ್ಲ.

9) ನಾನು ವಿವಾದಿತ ಕಾಗದಪತ್ರವನ್ನು ಬರೆಯಲು ಮಾಹಿತಿ ಕೊಟ್ಟಿರುವುದಿಲ್ಲ. ವಾದಿ ಪ್ರಭು ಇಟ್ನಾಳ ಹಾಗೂ ಅವನ ಬೆಂಬಲಿಗರು ಮತ್ತು ಸಂಬಂಧಿಕರು ಕೂಡಿಕೊಂಡು ಖೊಟ್ಟಿ ಕಾಗದವನ್ನು ಸೃಷ್ಟಿಸಿರುತ್ತಾರೆ. ವಾದಿಯು ಮಾಡಿದ ಪ್ರಸ್ತುತ ದಾವೆಯು ಕಾಲ ವಿಳಂಭದಿಂದ ಕೂಡಿದ್ದು ಮುದ್ದತ್ತು ಬಾಹಿರ ಇರುತ್ತದೆ. ಹೀಗೆ ಪ್ರಭು ಇಟ್ನಾಳ ಮತ್ತು ಸಾಕ್ಷಿದಾರರು ಕೂಡಿಕೊಂಡು ಖೊಟ್ಟಿ ಕಾಗದ ಪತ್ರಗಳನ್ನು ಸೃಷ್ಟಿಸಿ ನನ್ನ ಆಸ್ತಿಯನ್ನು ಎತ್ತಿಹಾಕಬೇಕೆಂಬ ದುರುದ್ದೇಶದಿಂದ ಖೊಟ್ಟಿ ಕಾಗದವನ್ನು ಸೃಷ್ಟಿಸಿರುತ್ತಾರೆ.

10) ಯಲ್ಲಪ್ಪ ಸಿದ್ದಪ್ಪ ಭಂಗಿ ಇತನು ಪ್ರಭು ಇಟ್ನಾಳ ಇತನಿಗೆ ಹತ್ತಿರ ಸಂಬಂಧಿಕನು ಇರುತ್ತಾನೆ. ಆತನು ಈ ದಾವೆದ ವಾದಿ ಪ್ರಭು ಇಟ್ನಾಳ ಇತನ ಜೊತೆಗೆ ಮಿಲಾಫಿಯಾಗಿ ಖೊಟ್ಟಿ ಕಾಗದವನ್ನು ಸೃಷ್ಟಿಸಿ ಆತನು ಕೂಡಾ ಕಾಗದದಲ್ಲಿ ನಮೂದಿಸಿದಂತೆ ಹಣ ಕೊಡದೆ ಖೊಟ್ಟಿ ಕಾಗದಗಳ ಆಧಾರದ ಮೇಲಿಂದ ನನ್ನ ಮೇಲೆ ಇನ್ನೊಂದು ಖೊಟ್ಟಿ ದಾವೆ ಮಾಡಿದ್ದು, ಸದರಿ ಆ ದಾವೆಯು ಕೂಡಾ ಚಾಲ್ತಿಯಲ್ಲಿ ಇರುತ್ತದೆ.

11) ಈ ಪ್ರಕರಣದಲ್ಲಿ ಅಡಕವಾಗಿರುವ ಆಸ್ತಿಯು ನೀರಾವರಿ ಜಮೀನು ಇದ್ದು ಸದರಿ ಜಮೀನಕ್ಕೆ ಭಾವಿ ಮತ್ತು ಬೋರವೆಲ್‌ದಿಂದ ನೀರಾವರಿ ಸೌಲಭ್ಯ ಇರುತ್ತದೆ. ಸದರಿ ಜಮೀನದಲ್ಲಿ ಕಬ್ಬು, ಗೋಂಜಾಳ ಮುಂತಾದ ಬೆಳೆಗಳನ್ನು ಬೆಳೆಯುತ್ತಾ ಬಂದಿರುತ್ತೇನೆ. ದಾವಾದ ಜಮೀನು ಸನ್ 2014 ರಲ್ಲಿ ಪ್ರತಿ

NOTARY * GOVERNMENT OF INDIA * S.B. GOROSHI GOKAK TALUKA DIST:BELAGAVI KARNATAKA REG.No:13237/2017 EXPIRY DATE: 25-04-2027

(1) one only
NO OF CORRECTION

ಸಿದ್ದಪ್ಪ ರಾ. ಸೋಗಿ

ಎಕರೆಗೆ 10 ರಿಂದ 15 ಲಕ್ಷ ರೂಪಾಯಿ ಕಿಮ್ಮತ್ತು ಆಗುತ್ತಿದ್ದು ನನ್ನ ಮನೆತನದ ಆರ್ಥಿಕ ಪರಿಸ್ಥಿತಿಯು ಚನ್ನಾಗಿ ಇರುತ್ತದೆ. ನಾನು ಆಸ್ತಿಯನ್ನು ಮಾರಾಟ ಮಾಡುವ ಬಗ್ಗೆ ಯಾವುದೆ ಮಾತುಕತೆ ಆಗಿರುವುದಿಲ್ಲ ಮತ್ತು ದಾವೆದ ಆಸ್ತಿಯನ್ನು ಮಾರಾಟ ಮಾಡಲು ನನಗೆ ಯಾವುದೆ ಮನೆತನದ ಹಣದ ಅಡಚಣೆ ಇದ್ದಿರಲಿಲ್ಲ. ವಾದಿ ಮತ್ತು ಸಾಕ್ಷಿದಾರರು ಕೂಡಿಕೊಂಡು ಖೊಟ್ಟಿ ಕಾಗದ ಸೃಷ್ಟಿಸಿ ನನ್ನ ಆಸ್ತಿಯನ್ನು ಎತ್ತಿಹಾಕಬೇಕೆಂಬ ದುರುದ್ದೇಶದಿಂದ ಖೊಟ್ಟಿ ಕಾಗದ ಸೃಷ್ಟಿಸಿ ನನ್ನ ಮೇಲೆ ಖೊಟ್ಟಿ ದಾವೆ ಮಾಡಿದ್ದು ಇರುತ್ತದೆ.

12) ನಾನು ಈಗಾಗಲೆ ಸದರಿ ದಾವೆಗೆ ಸಂಬಂಧಪಟ್ಟಂತೆ ಕಾಗದ ಪತ್ರಗಳನ್ನು ಹಾಜರ ಪಡಿಸಿದ್ದು ಅದನ್ನು ಮೆ:: ರವರು ನನ್ನ ಪರವಾಗಿ ನಿಶಾನೆಗೋಳಿಸಬೇಕಾಗಿ ವಿನಂತಿ.

ಆದ ಕಾರಣ ಮೆ:: ರವರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ವಾದಿಯು ಮಾಡಿದ ಸದರಿ ದಾವೆಯನ್ನು ಖರ್ಚು ಸಹಿತ ಕಿತ್ತು ಹಾಕಬೇಕು ಅಂತಾ ಮಾಡಿದ ಸಾಕ್ಷಿ ಅಫಿಡವ್ಹಿಟ.

ಸ್ಥಳ: ಗೋಕಾಕ
ದಿನಾಂಕ: 09-06-2026

ಸಿದ್ದಪ್ಪಾ.ರಾ.ಚೌಗಲಾ
ಶಪಥವಿಧಿಗಾರ

ಈ ಮೇಲೆ ಬರೆದ ಯಾವತ್ತು ಮಜಕೂರುಗಳು ನನ್ನ ಸ್ವಂತ ಮಾಹಿತಿ ಪ್ರಕಾರ ಹೇಳಿ ಬರೆಯಿಸಿದ್ದು, ಅದನ್ನು ಓದಿಸಿ, ತಿಳಿದುಕೊಂಡು ಸಹಿ ಮಾಡಿರುತ್ತೇನೆ ಮತ್ತು ಅವು ಸಂಪೂರ್ಣ ನಿಜವಿರುತ್ತದೆ.

ಸ್ಥಳ: ಗೋಕಾಕ
ದಿನಾಂಕ: 09-06-2026

ಸಿದ್ದಪ್ಪಾ.ರಾ.ಚೌಗಲಾ
ಶಪಥವಿಧಿಗಾರ

"ಸದರಿಯವರ ಪರಿಚಯವಿದೆ"

[ಬಿ. ಕೆ. ಜೋಶಿ]
ವಕೀಲರು - ಗೋಕಾಕ

NOTARY
S.B. GOROSHI
GOKAK TALUKA
DIST:BELAGAVI KARNATAKA
REG.No:13237/2017
EXPIRY DATE:
25-04-2027
GOVERNMENT OF INDIA

SWORN TO BEFORE ME
9 JUN 2026
S. B. GOROSHI B.A.,LL.B.(Spl.)
ADVOCATE & NOTARY,
GOKAK TALUKA

NO OF CORRECTION